**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪುಷ್ಪ | ಪ್ರಾಸಾ-1 |
| ಗಂಡನ ಹೆಸರು | : ಪ್ರವೀಣ್ | ಚಾಸಾ-1 |
| ವಯಸ್ಸು | : 27 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಂಗನವಾಡಿ ಸಹಾಯಕಿ | ದಿನಾಂಕಃ 01.07.2025. |
| ವಾಸಸ್ಥಳ | : ಬಣಕಲ್. | |

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ ವಕೀಲರಿಂದಃ**

ನಿಪಿ-1 ನ್ನು ಪೋಲಿಸ್ ಠಾಣೆಯಲ್ಲಿ ನಾನೇ ಬರೆದಿರುತ್ತೇನೆ. ನಾನು ನಿಪಿ-1 ನ್ನು ದಿ.27.06.2023 ರಂದು ಬೆ.10.00 ರ ಸಮಯಕ್ಕೆ ದಾಖಲಿಸಿರುತ್ತೇನೆ. ದಿ.26.06.2023 ರಂದು ರಾ.9.00 ರ ಸಮಯದಲ್ಲಿ ಪೋಲಿಸ್ ಠಾಣೆಯಲ್ಲಿ ನಾನು ದೂರನ್ನು ನೀಡಿರುತ್ತೇನೆ. ನಿಪಿ-1 ನ್ನು ತಿದ್ದುಪಡಿ ಮಾಡಲಾಗಿರುವುದಿಲ್ಲ. ನಿಪಿ-1 ನುನ ತಿದ್ದುಪಡಿ ಮಾಡಲಾಗಿರುವುದಿಲ್ಲ ಅದರಲ್ಲಿ ನನ್ನ ಹೆಸರು ಬಿಟ್ಟು ಹೋಗಿದ್ದ ಕಾರಣ ಪುಷ್ಪ ಪ್ರವೀಣ್ ಎಂದು ಬರೆದಿರುತ್ತೇನೆ. ಸದರಿ ದೂರಿನಲ್ಲಿ ರಾ.10.16 ನಿಮಿಷ ಎಂದು ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದೂರನ್ನು ಬರೆದಿರುವ ಶಾಹಿಗೂ ತಿದ್ದುಪಡಿ ಮಾಡಿರುವ ಶಾಹಿಗೂ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ದೂರನ್ನು ದಾಖಲಿಸಲು ಠಾಣೆಗೆ ಹೋಗಿರುತ್ತೇವೆ. ದಿ.26.06.2023 ರಂದು ನೀಡಿದಂತ ದೂರಿಗೆ ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ. ನನ್ನ ಮೊಬೈಲ್ ನ್ನು ಪೋಲಿಸರು ಅಮಾನತುಪಡಿಸಿಕೊಂಡಿಲ್ಲ ಮತ್ತು ಪರಿಶೀಲಿಸಿರುವುದಿಲ್ಲ. ಆರೋಪಿಯು ನನಗೆ ಕಳುಹಿಸಿರುವ ಸಂದೇಶದ ಸ್ಕ್ರೀನ್ ಶಾಟ್ ನ್ನು ತೆಗೆದುಕೊಂಡಿರುತ್ತೇನೆ. ಸದರಿ ಸ್ಕ್ರೀನ್ ಶಾಟ್ ನ್ನು ದಿ.27.06.2023 ರಂದು ದೂರನ್ನು ದಾಖಲಿಸುವ ಸಮಯದಲ್ಲಿ ಪೋಲಿಸರಿಗೆ ನೀಡಿರುತ್ತೇನೆ.

ದೂರನ್ನು ದಾಖಲಿಸಿದ ನಂತರ ನಾನು ಠಾಣೆಗೆ ಹೋಗಿರುವುದಿಲ್ಲ. ಆರೋಪಿಯ ಪತ್ನಿ ನನಗೆ ಪರಿಚಯಸ್ಥರಾಗಿರುತ್ತಾರೆ. ನನ್ನ ಮತ್ತು ಆರೋಪಿಯ ಪತ್ನಿಯೊಂದಿಗೆ ಹಣಕಾಸಿನ ವ್ಯವಹಾರವಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಪತ್ನಿಯೊಂದಿಗೆ ನಾನು ಹಣಕಾಸಿನ ವ್ಯವಹಾರ ಮಾಡುತ್ತಿದ್ದು ಅದರ ಬಾಬ್ತು ಒಂದು ಖಾಲಿ ಚೆಕ್ ನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಬಳಿ ಇರುವ ಬಾರ್ ಬಳಿ ಒಂದು ಸಿಸಿಟಿವಿ ಇರುತ್ತದೆ ಅಲ್ಲಿಂದ ನಮ್ಮ ಮನೆಯು ಕಾಣಿಸುತ್ತದೆ. ಸದರಿ ಸಿಸಿಟಿವಿ ಫೂಟೇಜ್ ನ್ನು ನಾನು ಪೋಲಿಸರಿಗ ನೀಡಿರುವುದಿಲ್ಲ. ಸದರಿ ಬಾರ್ ನ ವ್ಯವಹಾರವನ್ನು ಆರೋಪಿಯು ಮಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಬಾರ್ ನಲ್ಲಿ ಕೆಲಸ ಮಾಡುವ ಕೆಲಸಗಾರರೊಂದಿಗೆ ನಾನು ಹಣಕಾಸು ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರು ದಾಖಲಿಸಿದ ದಿನ ಆರೋಪಿಯು ಬಣಕಲ್ ಗ್ರಾಮದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಪತ್ನಿಯು ಬಾರ್ ಪಕ್ಕದಲ್ಲಿರುವ ಮನೆಯಲ್ಲಿ

ವಾಸಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಿ.26.06.2023 ರಂದು ಆರೋಪಿಯು ಯಾವುದೇ ವಾಟ್ಸ್ ಆಫ್ ಸ್ಟೇಟಸ್ ಹಾಕಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಅಕ್ಕಪಕ್ಕ ಮನೆ ಇರುತ್ತದೆ. ಸಾಮಾನ್ಯವಾಗಿ ನಮ್ಮ ಮನೆಯ ಬಾಗಿಲು ಶಬ್ದವಾದರೆ ಅಕ್ಕ ಪಕ್ಕದ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿ. ದಿ.06.06.2023 ರಂದು ರಾ.10.00 ರ ಸಮಯದಲ್ಲಿ ಆರೋಪಿಯು ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯು ನಮ್ಮ ಮನೆಯ ಒಳಗೆ ಬಂದು ನನ್ನೊಡನೆ ಗಲಾಟೆ ಮಾಡಿದ್ದು ಅದನ್ನು ಚಾಸಾ-2 ರವರು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಪತ್ನಿಯೊಂದಿಗೆ ಹಣಕಾಸಿನ ವ್ಯವಹಾರವಿದ್ದು ಅವರ ಬಳಿ ಪಡೆದ ಹಣವನ್ನು ನಾನುಹಿಂತಿರುಗಿಸಬೇಕಾಗುತ್ತದೆ ಎಂದು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಕರಣ ನಡೆಯದಿದ್ದರೂ ನ್ಯಾಯಾಧೀಶರವರ ಎದುರು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರ್ ನಡೆಯುವ ಪೂರ್ವದಲ್ಲಿ ಪೋಲಿಸರು ಕರೆ ಮಾಡಿ ತಿಳಿಸಿರುತ್ತಾರೆ. ಪೋಲಿಸರು ದಿ.15.08.2023 ರಂದು ಬೆ.11.00 ರ ಸಮಯಕ್ಕೆ ಸ್ಥಳ ಮಹಜರ್ ಗೆಂದು ಬಂದಿರುತ್ತಾರೆ. ಸದರಿ ಸಮಯದಲ್ಲಿ ಸಾರ್ವಜನಿಕರು ಹಾಜರಿರುತ್ತಾರೆ. ಆ ದಿನ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

ಆ ದಿನ ನಾನು, ಚಾಸಾ-2 ಮತ್ತು 3 ಹಾಗೂ ಇತರ ಪೋಲಿಸರು ಇದ್ದರು. ಆ ದಿನ ಪೋಲಿಸರು ಸ್ಥಳ ಮಹಜರ್ ಗೆಂದು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-3 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪಾವನಿ | ಪ್ರಾಸಾ-1 |
| ತಂದೆಯ ಹೆಸರು | : ಗೋಪಿ | ಚಾಸಾ-2 |
| ವಯಸ್ಸು | : 12 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ವ್ಯಾಸಂಗ | : 7 ನೇ ತರಗತಿ | ದಿನಾಂಕಃ 01.07.2025. |
| ವಾಸಸ್ಥಳ | : ಬಣಕಲ್. | |

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ ವಕೀಲರಿಂದಃ**

ನಾನು ಕಳೆದ 2 ವರ್ಷಗಳ ಕಾಲ ಚಾಸಾ-1 ರವರ ಮನೆಯಲ್ಲಿ ವಾಸಿಸುತ್ತಿದ್ದೆ. ಪ್ರಸ್ತುತವಾಗಿ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿರುತ್ತೇನೆ. ನಾನು ಚಾಸಾ-1 ರವರ ಮನೆಯಲ್ಲಿ ಇದ್ದ ಕಾಲದಲ್ಲಿ ವಿದ್ಯಾಭಾರತಿ ಶಾಲೆಗೆ ಹೋಗುತ್ತಿದೆ. ಪ್ರತಿನಿತ್ಯ ರಾ.9.00 ರ ಸಮಯಕ್ಕೆ ಮಲಗುತ್ತಿದ್ದೆ. ನಾನು ಘಟನೆ ನಡೆದ ದಿನ ಮಲಗಿರುತ್ತೇನೆ. ದಿ.26.06.2023 ರಂದು ಘಟನೆಯು ಸಂಭವಿಸಿರುತ್ತದೆ. ಪ್ರಸ್ತುತ ಪ್ರಕರಣವು ಸುಮಾರು 10.00 ರ ಸಮಯದ ಆಸುಪಾಸಿನಲ್ಲಿ ಸಂಭವಿಸಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಶಬ್ದ ಕೇಳಿ ಹೊರಗೆ ಬಂದಿರುತ್ತೀನಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಅರ್ಧ ಗಂಟೆಯ ನಂತರ ಚಾಸಾ-3 ರವರಿಗೆ ಕರೆ ಮಾಡಿರುತ್ತೇನೆ. ನಂತರ ಚಾಸಾ-3 ರವರು ಮನೆಗೆ ಹಿಂತಿರುಗಿರುತ್ತಾರೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.